ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198
E.Mail Address:
mimsmandya@gmail.com

## ದಿನಾಂಕ: 16.03.2013ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ: 406, 407 ರಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಾಮಾನ್ಯ ವಿಶೇಷ ಆಡಳಿತ ಪರಿಷತ್ ಸಭೆಯ ನಡವಳಿಗಳು:

**ಅಧ್ಯಕ್ಷತೆ :**

1. ಶ್ರೀ ಎಸ್.ಎ.ರಾಮದಾಸ್,
ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಹಾಗೂ ಅಧ್ಯಕ್ಷರು, ಮಿಮ್ಸ್ ಆಡಳಿತ ಪರಿಷತ್,
ಕರ್ನಾಟಕ ಸರ್ಕಾರ,
ಬೆಂಗಳೂರು.

**ಸಭೆಯಲ್ಲಿ ಹಾಜರಿದ್ದವರು**

2. ಸರ್ಕಾರದ ಕಾರ್ಯದರ್ಶಿಗಳು, — ಉಪಾಧ್ಯಕ್ಷರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ),
ಕರ್ನಾಟಕ ಸರ್ಕಾರ, ಬೆಂಗಳೂರು.

3. ಸರ್ಕಾರದ ಉಪ ಕಾರ್ಯದರ್ಶಿಗಳು, — ಸದಸ್ಯರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ),
ಕರ್ನಾಟಕ ಸರ್ಕಾರ, ಬೆಂಗಳೂರು.

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, — ಸದಸ್ಯರು
ಯೋಜನಾ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

5. ನಿರ್ದೇಶಕರು, — ಸದಸ್ಯರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಆನಂದ್‌ರಾವ್ ವೃತ್ತ, ಬೆಂಗಳೂರು.

6. ಮುಖ್ಯ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ಸಿ ಮತ್ತು ಬಿ, ದಕ್ಷಿಣ,
ಕೆ.ಆರ್.ವೃತ್ತ,
ಬೆಂಗಳೂರು. — ಸದಸ್ಯರು

7. ಜಿಲ್ಲಾಧಿಕಾರಿಗಳು,
ಮಂಡ್ಯ ಜಿಲ್ಲೆ,
ಮಂಡ್ಯ. — ಸದಸ್ಯರು

8. ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ಮಂಡ್ಯ — ಸದಸ್ಯರು

9. ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ — ಸದಸ್ಯರು

10. ಆರ್ಥಿಕ ಸಲಹೆಗಾರರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ. — ಸದಸ್ಯರು

11. ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ — ಸದಸ್ಯ ಕಾರ್ಯದರ್ಶಿಗಳು

ಪ್ರಾರಂಭದಲ್ಲಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಆಡಳಿತ ಪರಿಷತ್, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಪರಿಷತ್ ಸಭೆಯಲ್ಲಿ ಹಾಜರಿರುವ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ಸಭೆಯ ಅಧ್ಯಕ್ಷತೆ ವಹಿಸಿ ವಿಶೇಷ ಆಡಳಿತ ಪರಿಷತ್ ಸಭೆಯ ಸಭಾಸೂಚಿ (ಅಜೆಂಡಾ)ಯನ್ನು ವಿಷಯವಾರು ಚರ್ಚೆಗೆ ತೆಗೆದುಕೊಳ್ಳಲು ಸೂಚಿಸಿದರು.

ವಿಷಯ ಸಂಖ್ಯೆ : 1

**ದಿನಾಂಕ:24.05.2012 ರಂದು ನಡೆದ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ನಡವಳಿಗಳ ಅನುಪಾಲನಾ ವರದಿ ಅನುಮೋದನೆ ಕುರಿತು.**

ನಿರ್ಣಯ: ದಿನಾಂಕ:24.05.2012 ರಂದು ನಡೆದ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಮುಂದಿನ ಆಡಳಿತ ಪರಿಷತ್ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

ವಿಷಯ ಸಂಖ್ಯೆ : 2

**ದಿನಾಂಕ:10.01.2013 ರಂದು ನಡೆದ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ನಡವಳಿಗಳ ಅನುಪಾಲನಾ ವರದಿ ಅನುಮೋದನೆ ಕುರಿತು.**

ನಿರ್ಣಯ: ದಿನಾಂಕ:10.01.2013 ರಂದು ನಡೆದ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸಲಾಯಿತು.

ವಿಷಯ ಸಂಖ್ಯೆ : 3

**ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರನ್ನು ನೇಮಿಸುವ ಕುರಿತು.**

ನಿರ್ಣಯ: ದಿನಾಂಕ:12.03.2013 ರಂದು ನಡೆದ ಸಂಸ್ಥೆಯ ಆಯ್ಕೆ ಸಮಿತಿ ಸಭೆಯ ನಡವಳಿಯಂತೆ ಡಾ॥ಪುಷ್ಪಾಸರ್ಕಾರ್, ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು, ಜೀವರಸಾಯನಶಾಸ್ತ್ರ ವಿಭಾಗ, ಮಿಮ್ಸ್ ಮಂಡ್ಯ ರವರನ್ನು ಮುಂದಿನ ಮೂರು ವರ್ಷಗಳ ಅವಧಿ / ವಯೋನಿವೃತ್ತಿ / ಸರ್ಕಾರದ ಮುಂದಿನ ಆದೇಶದವರೆಗೆ (ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ) ಮಿಮ್ಸ್ ಸಂಸ್ಥೆಯ ನಿರ್ದೇಶಕರನ್ನಾಗಿ, ನೇಮಿಸಿ ಆದೇಶಿಸಲು ಸಭೆಯಲ್ಲಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ: 4**

**2010-11 ನೇ ಸಾಲಿನ ಆಯವ್ಯಯ ಅನುಮೋದನೆ ಕುರಿತು.**

**ನಿರ್ಣಯ:** 2010-11ನೇ ಸಾಲಿನ ಆಯವ್ಯಯವನ್ನು ಸಭೆಯಲ್ಲಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ : 5**

**ಸಂಸ್ಥೆಯ 2013-14 ನೇ ಸಾಲಿನ ಆಯವ್ಯಯ ಅನುಮೋದನೆ ಕುರಿತು.**

**ನಿರ್ಣಯ:** 2013-14ನೇ ಸಾಲಿನ ಆಯವ್ಯಯವನ್ನು ಸಭೆಯಲ್ಲಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ : 6**

**ಬೋಧಕ ಸಿಬ್ಬಂದಿ ವರ್ಗದವರಿಗೆ ಎ.ಐ.ಸಿ.ಟಿ.ಇ. ವೇತನ ಶ್ರೇಣಿ ಅಳವಡಿಸುವ ಬಗ್ಗೆ.**

**ನಿರ್ಣಯ:** ಸರ್ಕಾರಿ ಆದೇಶ ಸಂಖ್ಯೆ: ಆಕುಕ 04 ಎಂಎಂಇ 2010 ಬೆಂಗಳೂರು ದಿನಾಂಕ:16.12.2011 ಮತ್ತು ಆಕುಕ:94:ಎಂಎಂಸಿ:2012 ದಿನಾಂಕ:23.02.2013ರ ಆದೇಶದಂತೆ ಸಂಸ್ಥೆಯ ಬೋಧಕ ಸಿಬ್ಬಂದಿ ವರ್ಗದವರಿಗೆ ಎ.ಐ.ಸಿ.ಟಿ.ಇ. ವೇತನ ಶ್ರೇಣಿಯನ್ನು ಅಳವಡಿಸಿರುವುದನ್ನು ಸಭೆಯಲ್ಲಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ : 7**

**ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀ ಕೆ.ಎಸ್.ನಿಂಗಪ್ಪ, ನಿವೃತ್ತ ಕೆ.ಎ.ಎಸ್ ಅಧಿಕಾರಿಯವರ ವೇತನ ಕುರಿತು.**

**ನಿರ್ಣಯ:** ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀ ನಿಂಗಪ್ಪ.ಕೆ.ಎಸ್, ರವರಿಗೆ ಮಾಹೆಯಾನ ರೂ.35,000/-ಗಳ ವೇತನ ಪಾವತಿಸಲು ಸಭೆಯು ಅನುಮೋದನೆ ನೀಡಿತು.

ವಿಷಯ ಸಂಖ್ಯೆ : 8

**ಸಂಸ್ಥೆಯ ಆವರಣದಲ್ಲಿ ಡಯಾಲಿಸಿಸ್ ಸೆಂಟರ್ ನಿರ್ಮಾಣ ಮಾಡುವ ಕುರಿತು.**

ನಿರ್ಣಯ: ಪ್ರಸ್ತಾವನೆಯನ್ನು ಒಪ್ಪಲಾಯಿತು.

ಮುಂದುವರೆದು, ದಾನಿಗಳಾದ ಡಾ॥ಕೃಷ್ಣಪ್ಪ.ಕೆ.ಎನ್, ಚಾನ್ಸುಲರ್, ಕೊಲಂಬಿಯಾ ಯುನಿವರ್ಸಿಟಿ, ಯು.ಎಸ್.ಎ, ರವರಿಂದ ಕಟ್ಟಡವನ್ನು ಕಟ್ಟಿಸಿ ಮತ್ತು ಅದಕ್ಕೆ ಬೇಕಾಗುವ ಡಯಾಲಿಸಿಸ್ ಉಪಕರಣಗಳನ್ನು ಮಿಮ್ಸ್ ಸಂಸ್ಥೆಗೆ ದಾನವಾಗ ನೀಡಲು ದಾನಿಗಳಿಗೆ ಸೂಚಿಸಲು ಸಭೆಯು ತಿಳಿಸಿತು.

ದಾನಿಗಳ ಕೋರಿಕೆಯಂತೆ ಅವರ ತಂದೆ ದಿ॥ಕಬ್ಬಿಗೆರೆ.ಕೆ.ಸಿದ್ದೇಗೌಡ (ಸೀತಾಸುತಾ) ರವರ ಹೆಸರನಲ್ಲಿ ಕಟ್ಟಡಕ್ಕೆ ನಾಮಫಲಕ ಅಳವಡಿಸಲು ಸಭೆಯು ಅನುಮೋದಿಸಿತು.

ಅಲ್ಲದೆ ದಾನಿಗಳ ಜೊತೆ ಮಾಡಬೇಕಾದ ಒಡಂಬಡಿಕೆಯ (Memorandam of Understanding) ಕರಡನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಅನುಮೋದನೆ ಪಡೆದು ಮುಂದಿನ ಕ್ರಮ ವಹಿಸಲು ಆಡಳಿತ ಪರಿಷತ್ ಸಭೆಯು ತೀರ್ಮಾನಿಸಿತು.

(ಡಾ॥ದೇವಾನಂದ್.ಬಿ)
ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ

(ಎಸ್.ಎ.ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ
ಅಧ್ಯಕ್ಷರು, ಮಿಮ್ಸ್ ಆಡಳಿತ ಪರಿಷತ್,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ
(ಎಸ್.ಎ. ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು